ಮೂಲ ದಾವಾ ಸಂಖ್ಯೆ .179/2016 ಡಿ ಡಬ್ಲ್ಯೂ 1

(ದಿನಾಂಕ 24-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಹೆಚ್ ವಿ ವಕೀಲರಿಂದಃ-

ದಾವಾಸ್ತಿಯ ಸರ್ವೆ ನಂ.264 ಬಿ/ಬಿ ಇರುತ್ತದೆ. ಅದು ಒಟ್ಟು ವಿಸ್ತೀರ್ಣ 6 ಎಕರೆ 39 ಸೆಂಟ್ಸ ಇದೆ. ಸದರಿ ಆಸ್ತಿ ಜಯಪ್ಪ ಇವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿ ಮೂಲತಃ ಜಯಪ್ಪ ಇವರ ಮುತ್ತಜ್ಜಿ ವೆಂಕಟಭೀಮವ್ವ ಇವರಿಗೆ ಸಂಬಂಧಿಸಿದ್ದು ಇತ್ತು ಎಂದರೆ ಸರಿ. ಅವರಿಗೆ ಲಕ್ಷ್ಮವ್ವ, ಸೀತಮ್ಮ, ಹಿರಿಯಮ್ಮ ಮತ್ತು ಯಂಕವ್ವ ಎನ್ನುವ 4 ಜನ ಹೆಣ್ಣುಮಕಕಳು ಇದ್ದರೆಂದರೆ ಸರಿ. ಜಯಪ್ಪ ಇವರ ತಾಯಿ ಹನುಮವ್ವ ಎಂದರೆ ಸರಿ. ಸದರಿ ಹನುಮವ್ವ ಲಕ್ಷ್ಮವ್ವ ಇವರ ಮಗಳು ಎಂದರೆ ಸರಿ. ಸದರಿ 4 ಜನ ಹೆಣ್ಣುಮಕ್ಕಳು ಸುಮಾರು ವರ್ಷದ ಹಿಂದೆ ಸದರಿ 6 ಎಕರೆ 39 ಸೆಂಟ್ಸ ಜಮೀನಿನಲ್ಲಿ ಭಾಗ ಮಾಡಿಕೊಂಡಿರುತ್ತಾರೆಂದರೆ ಸರಿ. ಸದರಿ ಆಸ್ತಿಯು ಯಾವತ್ತೂ ಹನುಮವ್ವ ಇವರ ಸ್ವಾಧೀನದಲ್ಲಿತ್ತು ಎಂದರೆ ಸರಿ. ಸದರಿ ಆಸ್ತಿಯ ಪಹಣಿ ಹನುಮವ್ವರವರ ಹೆಸರಿನಲ್ಲಿತ್ತು ಎಂದರೆ ಸರಿ. ಕೆಲವು ಆಸ್ತಿಗಳನ್ನು ವಾದಿಯ ತಾಯಿ ಹನುಮವ್ವ ಇವರು ಮಾರಾಟ ಮಾಡಿದ್ದಾರೆಂದರೆ ಸರಿ. ನಮಗೆ ಸನ್ 1971 ನೇ ಇಸ್ವಿಯಲ್ಲಿ ಹನುಮವ್ವ ಇವರು ಸರ್ವೆ ನಂ.264 ಬಿ/ಬಿ ರಲ್ಲಿ ಪಶ್ಚಿಮ ದಿಕ್ಕಿನಲ್ಲಿ 1 ಎಕರೆ 03 ಸೆಂಟ್ಸ ಜಮೀನನ್ನು ಮಾರಾಟ ಮಾಡಿರುತ್ತಾರೆ. ಸದರಿ 1 ಎಕರೆ 03 ಸೆಂಟ್ಸ ಜಮೀನಿನಲ್ಲಿ ಹನುಮವ್ವನಿಂದ ನಮ್ಮ ಅಜ್ಜಿ ಲೇಸಿ ಕಡ್ಲೆಮ್ಮ ಇವರಿಗೆ ಪೂ-ಪ 16 ಮಳ ಮತ್ತು ಉ-ದ 48 ಮಳ ಆಸ್ತಿ ಬಂದಿರುತ್ತದೆ. ಸದರಿ ವಿಸ್ತೀರ್ಣದ ಆಸ್ತಿಯನ್ನು ನಮ್ಮ ಅಜ್ಜಿಗೆ ಪೂರ್ವದ ಕಡೆಗೆ ಕೊಟ್ಟಿರುತ್ತಾರೆ. 1 ಎಕರೆ 3 ಸೆಂಟ್ಸ ಜಮೀನಿನ ಚಕ್ಕುಬಂದಿ ಪೂಃಹನುಮವ್ವನ ಹೊಲ, ಪಃ ಬಿಜ್ಜಳ್ಳಿ ರಸ್ತೆ, ಉಃ ಪೂಜಾರ ಗಿರಿಯಮ್ಮನ ಹೊಲ ಮತ್ತು ದಃನೇವರ ಪಂಪಣ್ಣ ಇವರ ಹೊಲ ಬರುತ್ತದೆ. ಸದರಿ ಚಕ್ಕುಬಂದಿ ಮಧ್ಯದಲ್ಲಿ ಪೂರ್ವ ದಿಕ್ಕಿನಲ್ಲಿ ನಾನು ಮನೆ ಕಟ್ಟಿಕೊಂಡಿರುತ್ತೇನೆ. ನಾನು ಕಟ್ಟಿರುವ ಮನೆಯ ಚಕ್ಕುಬಂದಿ ಪೂಃ ಹನುಮವ್ವನ ಜಾಗ, ಪಃ ಅಂಗಡಿ ಕೊಟ್ರಪ್ಪನ ಜಾಗ, ಉಃ ಪೂಜಾರಿ ಹಿರಿಯಮ್ಮನ ಹೊಲ ಹಾಗೂ ದಃ ನೇವಾರ ಪಂಪಣ್ಣ ಇವರ ಹೊಲ ಇರುತ್ತದೆ. ನಾನು ಅಕ್ರಮವಾಗಿ ಕಟ್ಟಿರುವ ಮನೆಯ ಪೂಃ ಒಂಟೆಗೋಡಿ ಗವಿಸಿದ್ದಪ್ಪ ಇವರ ಮನೆ ಬರುತ್ತದೆಂದರೆ ಸರಿಯಲ್ಲ, ಪಃ ಗುರುಸಿದ್ದಯ್ಯ ಇವರ ಮನೆ ಎಂದರೆ ಸರಿಯಲ್ಲ, ಉಃಗಿರಿಯಮ್ಮನ ಮಕ್ಕಳ ಖಾಲಿ ಜಾಗ ಇದೆ ಎಂದರೆ ಸರಿಯಲ್ಲ. ದಃ ರಸ್ತೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಸ್ವತ್ತಿನಲ್ಲಿ ನಾನು ಅಕ್ರಮವಾಗಿ ಪೂ-ಪ 20 ಅಡಿ ಮತ್ತು ಉ-ದ 40 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಕೊಂಡಿರುತ್ತೇನೆಂದರೆ ಸರಿಯಲ್ಲ. ಮನೆ ಕಟ್ಟುವ

ಪೂರ್ವದಲ್ಲಿ ಪಂಚಾಯ್ತಿಯಿಂದ ಮನೆ ಕಟ್ಟಲು ಪರವಾನಿಗೆ ಪಡೆದಿರುತ್ತೇನೆ. ಸದರಿ ಪರವಾನಿಗೆ ಕೊಡಬೇಕಾದರೆ ಪಂಚಾಯ್ತಿಯಲ್ಲಿ ಠರಾವು ಪಾಸು ಮಾಡಿ ಪರವಾಗೆ ನೀಡುತ್ತಾರೆಂದರೆ ಸರಿ. ಸದರಿ ಲೈಸನ್ಸ ಪಡೆಯಲು ಪಂಚಾಯ್ತಿಗೆ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರಬಹುದು ಎನ್ನುತ್ತಾರೆ. ಪಂಚಾಯ್ತಿಯವರು ಠರಾವು ಪಾಸು ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ವಾದಿಯು ಸನ್ 2014 ರಲ್ಲಿ ತನ್ನ ಜಮೀನನ್ನು ಅಳತೆ ಮಾಡಿಸುವ ಕುರಿತು ಸರ್ವೆ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆಗ ಸರ್ವೆ ಮಾಡಲು ಸರ್ವೆ ಅಧಿಕಾರಿಗಳು ಜಮೀನಿಗೆ ಬಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ ಅಧಿಕಾರಿಗಳು ವಾದಿಯ ಜಮೀನಿನಲ್ಲಿ ಅಕ್ರಮವಾಗಿ ಮನೆ ಕಟ್ಟಿಕೊಂಡಿರುತ್ತಾರಂತಾ ವರದಿ ಬರೆದುಕೊಂಡು ಹೋಗಿರುತ್ತಾರೆಂದರೆ ಸಾಕ್ಷಿಯು ಅವರು ಸ್ವಾಧೀನದಲ್ಲಿಲ್ಲವೆಂದು ಬರೆದುಕೊಂಡು ಹೋಗಿರುತ್ತಾರೆ. ಆ ದಿನ ಅಳತೆ ಮಾಡಲು ಬಂದ ಸರ್ವೆ ಅಧಿಕಾರಿಗಳು ಸದರಿ ಜಮೀನಿನಲ್ಲಿ ಮನೆಗಳು ಇರುವುದರಿಂದ ಅಳತೆ ಕಾರ್ಯ ಮಾಡಿರುವುದಿಲ್ಲ. ನಮ್ಮ ಅಜ್ಜಿ ಕಡ್ಲೆಮ್ಮ ಇವರು ಹನುಮವ್ವ ಇವರಿಂದ ಆಸ್ತಿಯನ್ನು ಖರೀದಿಗೆ ದಿಃ 12-05-1971 ರಲ್ಲಿ ಪಡೆದಿರುತ್ತಾರೆ. ನಾನು ಮನೆಕಟ್ಟಿಕೊಂಡಿರುವ ಚಕ್ಕುಬಂದಿಗೆ ಸಂಬಂಧಿಸಿದಂತೆ ಹನುಮವ್ವ ಇವರು ನಮ್ಮ ಅಜ್ಜಿಗೆ ಯಾವುದೇ ಖರೀದಿ ಪತ್ರವನ್ನು ಮಾಡಿಸಿಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಹನುಮವ್ವನಿಂದ ತೋಟವ್ವ ಇವರಿಗೆ ಸನ್ 1971 ರಲ್ಲಿ ಖರೀದಿಯಾದ ಆಸ್ತಿಯ ಖರೀದಿ ಪತ್ರದಲ್ಲಿ ವಿಸ್ತೀರ್ಣ 16 )( 48 ಮಳ ಇದೆ ಅದರ ಚಕ್ಕುಬಂದಿ ಪೂಃ ಹಂಚೆಗುಡಿ ಕಡ್ಲೆಮ್ಮ, ಪಃ ಅಂಗಡಿ ಕೊಟ್ರಪ್ಪ, ಉಃ ಪೂಜಾರ ಗಿರಿಯಮ್ಮ ಇವರ ಹೊಲ ಹಾಗೂ ದಃ ನೇವರ್ ಪಂಪಣ್ಣ ಇವರ ಜಮೀನು ಇದೆ. ತೋಟವ್ವ ಇವರು ಮೇಲೆ ಹೇಳಿದ ಚಕ್ಕುಬಂದಿಗೆ ಸಂಬಂಧಿಸಿದಂತೆ ಯಾವುದೇ ಆಸ್ತಿಯನ್ನು ಹನುಮವ್ವನಿಂದ ಖರೀದಿ ಮಾಡಿಲ್ಲವೆಂದರೆ ಸರಿಯಲ್ಲ. ದಿಃ 15-09-1982 ರಂದು ತೋಟಮ್ಮ ಇವರು ಗುರುಸಿದ್ದಯ್ಯರವರಿಗೆ ಯಾವ ಜಾಗವನ್ನು ಮಾರಾಟ ಮಾಡಿದರೆಂದರೆ ಸಾಕ್ಷಿಯು ಹನುಮವ್ವನಿಂದ ತೋಟವ್ವ ಇವರು ಖರೀದಿಸಿದ ಆಸ್ತಿಯನ್ನು ಮಾರಾಟ ಮಾಡಿದ್ದಾರೆನ್ನುತ್ತಾರೆ. ತೋಟವ್ವ ಮತ್ತು ಕಡ್ಲೆವ್ವ ಇವರು ತಮ್ಮ ತಮ್ಮ ಸ್ವತ್ತುಗಳನ್ನು ಅದಲು ಬದಲು ಮಾಡಿಕೊಂಡು ಸ್ವಾಧೀನದಲ್ಲಿರುತ್ತಾರೆ. ಆ ಬಗ್ಗೆ

ದಾಖಲೆಯನ್ನು ಮಾಡಿಕೊಂಡಿರುತ್ತೇವೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಎಲ್ಲಾ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಗವಿಸಿದ್ದಪ್ಪ, ಗುರುಸಿದ್ದಪ್ಪ, ಗುರುಸಿದ್ದಯ್ಯ, ವಂಟಗೋಡಿ ವೀರಣ್ಣ, ಕೋಗಳಿ ರುದ್ರಮ್ಮ ಇವರೆಲ್ಲರೂ ಸೇರಿ ಹಳೇ ಖರೀದಿಪತ್ರದಧಾರದ ಮೇಲೆ ದಾಖಲೆ ಮಾಡಿಕೊಡಲು ಎ ಸಿ ಯವರಿಗೆ ಅರ್ಜಿ ನೀಡಿದ್ದರೆಂದರೆ ಸರಿ. ಸದರಿ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 170/2016, 180/2016 ಹಾಗೂ ಇತರೆ ದಾವೆಗಳಿದ್ದವು ಎಂದರೆ ಸರಿ. ಆ ಸಮಯದಲ್ಲಿ ಜಮೀನಿನ ಪಹಣಿಗಳು ವಾದಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ವಾದಿಯ ತಾಯಿಯ ಹೆಸರಿನಲ್ಲಿತ್ತು ಎನ್ನುತ್ತಾರೆ. ಗ್ರಾಮ ಪಂಚಾಯ್ತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಾನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಕಟ್ಟಿಕೊಂಡಿರುವಂತಹ ಮನೆಯ ಜಾಗವನ್ನು ನಮಗೆ ವಾದಿಯಾಗಲೀ, ಅವರ ತಾಯಿಯಾಗಲೀ ಯಾವತ್ತೂ ಮಾರಾಟ ಮಾಡಿಲ್ಲವೆಂದರೆ ಸರಿಯಲ್ಲ. ತೋಟಮ್ಮ ಇವರು ಗುರುಸಿದ್ದಯ್ಯನವರಿಗೆ ಆಸ್ತಿ ಮಾರಾಟ ಮಾಡಲು ತೋಟಮ್ಮ ಇವರಿಗೆ ಯಾವುದೇ ಅಧಿಕಾರವಿರಲಿಲ್ಲವೆಂದರೆ ಸರಿಯಲ್ಲ. ಹನುಮವ್ವ ಇವರು ದಿಃ 20-04-1972 ರಲ್ಲಿ ವಂಟಗೋಡಿ ರುದ್ರಪ್ಪ ಇವರಿಗೆ ಆಸ್ತಿ ಮಾರಾಟ ಮಾಡಿದ್ದಾರಂತಾ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುತ್ತೀರಿ ಎಂದರೆ ಸರಿ. ಸದರಿ ಆಸ್ತಿಯು ಮೇಲೆ ಹೇಳಿದ ಸರ್ವೆ ನಂಬರಿನ ಪೂರ್ವಕ್ಕೆ ಬರುತ್ತದೆ. ಸದರಿ ಆಸ್ತಿಯ ಚಕ್ಕುಬಂದಿ ನನಗೆ ಹೇಳಲು ಬರುತ್ತದೆ. ಪೂಃಹನುಮವ್ವನ ಜಾಗ, ಪಃ ತೋಟವ್ವನ ಜಾಗ, ಉಃ ಗಿರಿಯಮ್ಮನ ಹೊಲ, ದಃ ನೇವಾರ ಪಂಪಣ್ಣ ಇವರ ಹೊಲ ಇರುತ್ತದೆ. ಈ ಚಕ್ಕುಬಂದಿ ಮಧ್ಯದಲ್ಲಿರುವ ಜಾಗವನ್ನು ಹನುಮವ್ವ ಮಾರಾಟ ಮಾಡಿಲ್ಲವೆಂದರೆ ಸರಿಯಲ್ಲ. ಸದರಿ ಜಾಗದ ವಿಸ್ತೀರ್ಣ ಪೂ-ಪ 76 ಮಳ ಹಾಗೂ ಉ-ದ 48 ಮಳ ಇರುತ್ತದೆ. ಸದರಿ ಅಳತೆಯ ಜಾಗವನ್ನು ಹನುಮವ್ವ ಮಾರಾಟ ಮಾಡಿಲ್ಲವೆಂದರೆ ಸರಿಯಲ್ಲ. ದಿಃ 12-05-1971 ರಂದು ವಾದಿಯ ತಾಯಿ ಕೊಟ್ರಗೌಡ ಇವರಿಗೆ ಮೇಲೆ ಹೇಳಿದ ಸರ್ವೆ ನಂಬರಿನಲ್ಲಿ ಪಶ್ಚಿಮ ದಿಕ್ಕಿನಲ್ಲಿ 16 )( 48 ಮಳ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಅದರ ಚಕ್ಕುಬಂದಿ ಪೂಃ ಲೇಸಿ ಕಡ್ಲೆಮ್ಮ ಇವರ ಮನೆ, ಪಃ ರಾಟಿ ಶಿವಾನಂದಪ್ಪನವರ ಜಾಗ, ಉಃಪೂಜಾರ ಗಿರಿಯಮ್ಮ ಇವರ ಹೊಲ ಹಾಗೂ ದಃ ನೇವಾರ ಪಂಪಣ್ಣ ಇವರ ಹೊಲ ಇರುತ್ತದೆ.

ಮೂಲ ದಾವಾ ಸಂಖ್ಯೆ .179/2016 ಡಿ ಡಬ್ಲ್ಯೂ 1

ಸದರಿ ಚಕ್ಕುಬಂದಿ ಮಧ್ಯದಲ್ಲಿರುವ ಜಾಗವನ್ನು ವಾದಿಯ ತಾಯಿ ಕೊಟ್ರಗೌಡ ಇವರಿಗೆ ಮಾರಾಟ ಮಾಡಿಲ್ಲವೆಂದರೆ ಸರಿಯಲ್ಲ.

ದಿಃ 12-05-1971 ರಂದು ಹನುಮವ್ವನಿಂದ ತೋಟವ್ವ, ತೋಟವ್ವನಿಂದ ಕಡ್ಲೆವ್ವ ಹಾಗೂ ಕೊಟ್ರಗೌಡ ಇವರ ಹೆಸರಿಗೆ ಪ್ರತ್ಯೇಕವಾಗಿ ಖರೀದಿ ಪತ್ರಗಳಾಗಿರುತ್ತವಂತಾ ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ದಿಃ05-12-1992 ರಂದು ಕೊಟ್ರಗೌಡ ಇವರು ಗುರುಸಿದ್ದಪ್ಪ ಇವರಿಗೆ ಮೇಲೆ ಹೇಳಿದ ಸರ್ವೆ ನಂಬರಿನಲ್ಲಿ 16 )( 48 ಮಳ ಆಸ್ತಿಯನ್ನು ಮಾರಾಟ ಮಾಡಿದ್ದಾರೆ. ಆ ರೀತಿ ಮಾರಾಟ ಮಾಡಲು ಕೊಟ್ರಗೌಡ ಇವರಿಗೆ ಯಾವುದೇ ಅಧಿಕಾರ ಇರಲಿಲ್ಲವೆಂದರೆ ಸರಿಯಲ್ಲ. ದಿಃ 08-11-1989 ರಂದು ಶಿವಾನಂದಪ್ಪ, ಜಯಪ್ಪ ಮತ್ತು ರಾಚಪ್ಪ ಇವರು ಗುರುಸಿದ್ದಪ್ಪ ಇವರಿಗೆ ಮೇಲೆ ಹೇಳಿದ ಸರ್ವೆ ನಂಬರಿನಲ್ಲಿ ಪಶ್ಚಿಮ ದಿಕ್ಕಿಗೆ 16 )( 48 ಮಳ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಸದರಿಯವರಿಗೂ ಸಹಾ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಅಧಿಕಾರ ಇರಲಿಲ್ಲವೆಂದರೆ ಸರಿಯಲ್ಲ. ಚನ್ನಬಸಪ್ಪ ಇವರು ಕೋಗಳಿ ರುದ್ರಮ್ಮ ಇವರಿಗೆ ದಿಃ 07-04-2011 ರಂದು ಮಾರಾಟ ಮಾಡಿದ ಆಸ್ತಿ ಚನ್ನಬಸಪ್ಪ ಇವರಿಗೆ ಹೇಗೆ ಬಂದಿತ್ತು ಎಂದರೆ ಸಾಕ್ಷಿಯು ಹನುಮ್ವನಿಂದ ಸದರಿ ಆಸ್ತಿ ಕೊಟ್ರಪ್ಪನಿಗೆ ಬಂದಿತ್ತು ಸದರಿ ಚನ್ನಬಸಪ್ಪ ಕೊಟ್ರಪ್ಪನ ಮಗ ಆಗಿದ್ದರಿಂದ ಆ ಆಸ್ತಿ ಅವನಿಗೆ ಬಂದಿತ್ತು ಎನ್ನುತ್ತಾರೆ. ಸದರಿ ಕೊಟ್ರಪ್ಪ ಇವರು ಹನುಮವ್ವನಿಂದ ಖರೀದಿ ಮಾಡಿದ ಆಸ್ತಿಯ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ಖರೀದಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ